ಫ್ಯಾಕ್ಸ್ (Fax): 0836 – 2740128
E-mail ID: dlsa.dwd2@gmail.com

# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ

ಎ.ಡಿ.ಆರ್. ಕಟ್ಟಡ, ದಿವಾಣಿ ನ್ಯಾಯಾಲಯಗಳ ಆವರಣ, ಪಿ.ಬಿ. ರಸ್ತೆ, ಧಾರವಾಡ – 580 001.

# DISTRICT LEGAL SERVICES AUTHORITY

ADR BUILDING, CIVIL COURTS PREMISES, P.B. ROAD, DHARWAD – 580 001.

ಸಂಖ್ಯೆ: ಜಿಕಾಸೇಪ್ರಾಧಾ:
No.: DLSADwd : 196 /2025

ಸದಸ್ಯ ಕಾರ್ಯದರ್ಶಿಗಳವರ ಕಾರ್ಯಾಲಯ
Office of the Member Secretary
ದಿನಾಂಕ:15–04–2025

## ಪ್ರಕಟಣೆ

**ಕಾನೂನು ವೃತ್ತಿಗಾರರನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನಲ್ ನ್ಯಾಯವಾದಿಗಳನ್ನಾಗಿ ನೇಮಕಾತಿ ಮಾಡುವ ಕುರಿತು.**

**ಪ್ರಕಟಣೆ ನಂ. ಜಿ.ಕಾ.ಸೇ.ಪ್ರಾ/ಸನ್ಯಾ/ನೇಮಕಾತಿ/ 196/2025 ದಿನಾಂಕ:15–04–2025**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ ಇಲ್ಲಿ ಕಾರ್ಯನಿರ್ವಹಿಸಲು ***"ಪ್ರಾಧಿಕಾರದ ಪ್ಯಾನಲ್ ನ್ಯಾಯವಾದಿಗಳನ್ನಾಗಿ"*** ನೇಮಕ ಮಾಡಿಕೊಳ್ಳಲು ಪ್ರಕಟಣೆಯನ್ನು ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

**ನೇಮಕಾತಿ ವಿಧಾನ:–**

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ಉಚಿತ ಹಾಗೂ ಸಮರ್ಥ) ನಿಯಮ 2010ರ ನಿರ್ದೇಶನದಂತೆ ನೇಮಕಾತಿ ಪ್ರಾಧಿಕಾರದ ಮುಖ್ಯಸ್ಥರಾದ ಗೌರವಾನ್ವಿತ ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡರವರ ಅಧ್ಯಕ್ಷತೆಯಲ್ಲಿ.

**ಅರ್ಹತೆಗಳು:–**

1. ಪ್ರಾಧಿಕಾರದ ನ್ಯಾಯವಾದಿಗಳನ್ನಾಗಿ ನೇಮಕಾತಿ ಮಾಡಿಕೊಳ್ಳಲು 03 ವರ್ಷಗಳಿಗಿಂತ ಹೆಚ್ಚಿನ ಅವಧಿ ಕಾನೂನು ವೃತ್ತಿಯನ್ನು ಮಾಡಿರುವುದು ಕಡ್ಡಾಯ.

Scanned with OKEN Scanner

**ಅರ್ಜಿದಾರರಿಗೆ ಸಾಮಾನ್ಯ ಸೂಚನೆಗಳು:-**

1. ಪ್ರಾಧಿಕಾರದ ನ್ಯಾಯವಾದಿಗಳಾಗಿ ಸೇವೆ ಸಲ್ಲಿಸಲು ಇಚ್ಛೆಯಿರುವ ಕಾನೂನು ವೃತ್ತಿಗಾರರು ಅರ್ಜಿಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿ, ಎಡಿಆರ್ ಕಟ್ಟಡ ಸಿವಿಲ್ ನ್ಯಾಯಲಯಗಳ ಆವರಣ, ಧಾರವಾಡ ಇಲ್ಲಿ ಪಡೆದುಕೊಳ್ಳಬಹುದು.
2. ಅಭ್ಯರ್ಥಿಗಳು ಭರ್ತಿಮಾಡಿದ ಅರ್ಜಿಯನ್ನು ದಿನಾಂಕ:02-05-2025 ಸಂಜೆ 05.45 ಗಂಟೆಯ ಒಳಗಾಗಿ ಸಲ್ಲಿಸುವುದು. ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಅಭ್ಯರ್ಥಿಗಳು ಭರ್ತಿಮಾಡಿದ ನಿಗದಿತ ನಮೂನೆಯೊಂದಿಗೆ ಕಾನೂನು ಪದವಿ ಅಂಕಪಟ್ಟಿಗಳ ಧೃಡಿಕೃತ ದಾಖಲಾತಿಗಳು, ಆಧಾರ ಕಾರ್ಡನ ಪ್ರತಿ, ಅಭ್ಯರ್ಥಿ ನೊಂದಣಿ ಮಾಡಿಕೊಂಡ ವಕೀಲರ ಸಂಘದಿಂದ ವೃತ್ತಿಯ ಅನುಭವದ ಪ್ರಮಾಣ ಪತ್ರ, ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನಿಂದ ಪಡೆದುಕೊಂಡ ಪ್ರಮಾಣ ಪತ್ರವನ್ನು, ಜಾತಿ ಪ್ರಮಾಣ ಪತ್ರವನ್ನು ಹಾಗೂ ಪಾಸ್‌ಪೋರ್ಟ ಅಳತೆಯ ಭಾವಚಿತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.
4. ಅಭ್ಯರ್ಥಿಗಳು ಸಾಮಾನ್ಯ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವುದು ಹಾಗೂ ಅನುಸರಿಸುವುದರೊಂದಿಗೆ ಅರ್ಜಿಯನ್ನು ಸಲ್ಲಿಸುವುದು.
5. ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ಚಾಲ್ತಿ ಇರುವ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ಕಡ್ಡಾಯವಾಗಿ ನಮೂದಿಸುವುದು.
6. ಪ್ರಾಧಿಕಾರದ ನ್ಯಾಯವಾದಿಗಳನ್ನಾಗಿ ನೇಮಕಾತಿ ಮಾಡಿಕೊಳ್ಳಲು ನೇಮಕಾತಿ ಸಮಿತಿಯ ಅಧ್ಯಕ್ಷರ ನಿರ್ಣಯವೇ ಅಂತಿಮ.
7. ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಯ ನೋಟಿಸ್ ಬೋರ್ಡನಲ್ಲಿ ಪ್ರಕಟಿಸಲಾಗುವುದು.
8. ಅರ್ಹ ಅಭ್ಯರ್ಥಿಗಳ ಸಂದರ್ಶನದ ಸಮಯ ಹಾಗೂ ಸ್ಥಳವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಪ್ರಕಟಣೆಯ ಮುಖಾಂತರ ತಿಳಿಸಲಾಗುವುದು.
9. ಪ್ರಾಧಿಕಾರದ ನ್ಯಾಯವಾದಿಗಳ ನೇಮಕಾತಿಯು ಅಭ್ಯರ್ಥಿಯ ಸಂಪೂರ್ಣ ಅರ್ಹತೆ ಮತ್ತು ತೃಪ್ತಿಯ ಪರೀಕ್ಷೆಯು ನೇಮಕಾತಿ ಸಮಿತಿಯ ನಿರ್ಣಯವಾಗಿರುತ್ತದೆ.

Scanned with OKEN Scanner

10. ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡ ನಂತರದಲ್ಲಿ ಪ್ರಾಧಿಕಾರ ನ್ಯಾಯವಾದಿಗಳ ಕರ್ತವ್ಯ ನಿರ್ವಹಣೆಯಲ್ಲಿ ತೃಪ್ತಿಕರವಾಗಿರದ ಸಂದರ್ಭದಲ್ಲಿ ಅಂತಹ ನ್ಯಾಯವಾದಿಯನ್ನು ಪ್ರಾಧಿಕಾರದಿಂದ ತೆಗದು ಹಾಕುವ ಸಂಪೂರ್ಣ ಅಧಿಕಾರ ನೇಮಕಾತಿ ಸಮಿತಿಗೆ ಇರುತ್ತದೆ.

11. ಪ್ರಾಧಿಕಾರದ ನ್ಯಾಯವಾದಿಯಾಗಿ ನೇಮಕಗೊಂಡು ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಉಚಿತ ಕಾನೂನು ನೆರವು ಕೋರಿ ಬಂದ ಅರ್ಜಿದಾರರಿಂದ ಯಾವುದೇ ಗೌರವಧನ ಅಥವಾ ಮೌಲ್ಯಯುತವಾದ ಕಾಣಿಕೆಗಳನ್ನು ಪಡೆಯುವಂತಿಲ್ಲ ಹಾಗೂ ಅವರನ್ನು ಕೊಡುವಂತೆ ಒತ್ತಾಯಿಸುವಂತಿಲ್ಲ, ಹಾಗೆ ಪಡೆದುಕೊಂಡ ಮಾಹಿತಿಯು ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ತಕ್ಷಣವೇ ಪ್ರಾಧಿಕಾರದ ನ್ಯಾಯವಾದಿ ಕರ್ತವ್ಯದಿಂದ ವಜಾಗೊಳಿಸಲಾಗುವುದು.

12. ಪ್ರಾಧಿಕಾದ ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸಲು 03 ವರ್ಷಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು ಹಾಗೂ ಒಂದು ವೇಳೆ ಪ್ರಾಧಿಕಾರದ ನ್ಯಾಯವಾದಿಯ ಕಾರ್ಯವೈಕರಿಯು ತೃಪ್ತಿಕರ ಹಾಗೂ ಸಮರ್ಪಕವಾಗಿರುವುದಿಲ್ಲ ಎಂದು ಕಂಡುಬಂದಲ್ಲಿ. ಪ್ರಾಧಿಕಾರದ ನ್ಯಾಯಾವಾದಿ ಕರ್ತವ್ಯದಿಂದ ಅವರನ್ನು ವಜಾಗೊಳಿಸುವ ಅಧಿಕಾರವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಹೊಂದಿರುತ್ತದೆ.

*ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ*
*ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡರವರ ಆದೇಶದ ಮೇರೆಗೆ*

15.4.25

*ಪರಶುರಾಮ ಎಫ್. ದೊಡ್ಡಮನಿ*
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ,
ಧಾರವಾಡ

Scanned with OKEN Scanner

*Schedule-I*

## APPLICATION BY THE ADVOCATES FOR EMPANELLMENT

**RECENT PASSPORT SIZE PHOTO**

| | | |
|---|---|---|
| 1 | Name of the applicant | |
| 2 | Father/mother/spouse name | |
| 3 | Age | |
| 4 | Address permanent/current | |
| 5 | Land line number | |
| 6 | Mobile number | |
| 7 | Email address | |
| 8 | Educational qualification | |
| 9 | Enrollment number (enclose copy of certificate issued by Karnataka State Bar Council) | |
| 10 | Experience as advocate in years Details of specialization/ field of law | |
| 11 | Caste If belongs to SC/ST/OBC or category, General etc., please specify | |
| 12 | Languages knows to read and write | |

I hereby declare that having understood the objectives and purposes of The Legal Services Authorities Act I have filed this application

Place :

Date : *Signature of the applicant*



Scanned with OKEN Scanner